# ದಿವಾಣಿ ನ್ಯಾಯಾಧೀಶರು ಹಾಗೂ ಜೆ ಎಂ ಎಫ್ ಸಿ ನ್ಯಾಯಾಲಯ, ನವಲಗುಂದ.

## ಸಿ. ಸಿ. ನಂಃ 518/2019

ಪಿ.ಡಬ್ಲ್ಯೂ- 4
ಸಿ.ಡಬ್ಲೂ- 6

| | | |
|---|---|---|
| ಹೆಸರು | ಃ- | ಈರಣ್ಣ ಗುರೀಕಾರ |
| ತಂದೆ / ಗಂಡನ ಹೆಸರು | ಃ- | ಕೊಟ್ರಪ್ಪ |
| ವಯಾ | ಃ- | 43 ವರ್ಷ |
| ಉದ್ಯೋಗ | ಃ- | ವರದಿಗಾರರು |
| ವಾಸಸ್ಥಳ | ಃ- | ಅಣ್ಣಿಗೇರಿ |
| ಸತ್ಯ ಪ್ರತಿಜ್ಞೆ ಮೇರೆಗೆ | ಃ- | ದಿನಾಂಕಃ 24-04-2025 |

***ಮುಖ್ಯ ವಿಚಾರಣೆ ಃ- ಶ್ರೀ ಸ.ಸ.ಅ. ರವರಿಂದ ಃ***

ನನಗೆ ಈ ಪ್ರಕರಣದ ಬಗ್ಗೆ ಮಾಹಿತಿ ಇಲ್ಲ. ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿಲ್ಲ. ಆರೋಪಿತನ ಪರಿಚಯವಿದೆ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಎಂದ ಮಾನ್ಯ ಸ ಸ ಅ ರವರು ಕೋರಿದ್ದರಿಂದ, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀಸವಾಲಿಗೆ ಅನುಮತಿಯನ್ನು ನೀಡಲಾಯಿತು.)

**ಪಾಟೀಸವಾಲು ಃ ಮಾನ್ಯ ಸ ಸ ಅ ರವರಿಂದ ಃ -**

1) ದಿನಾಂಕ 09-04-2019 ರಂದು ಸುಮಾರು ಬೆಳಗ್ಗೆ 10-30 ಗಂಟೆಗೆ ನಾನು ಅಣ್ಣಿಗೇರಿಯ ಕೆ.ಎಸ್.ಆರ್.ಟಿ.ಸಿ. ಬಸ್ಸ ನಿಲ್ದಾಣದಲ್ಲಿ ಇದ್ದಾಗ ಆರೋಪಿತನು ಚಲಾಯಿಸಿಕೊಂಡು ಬಂದ ಬಸ್ಸ ಸಂಖ್ಯೆ ಕೆಎ 23 ಎಫ್ 764 ನ್ನು ನವಲಗುಂದ ಕಡೆಗೆ ಹೋಗಲು ನಿಲ್ಲಿಸಿರುತ್ತಾನೆ ಅಂದರೆ ಸರಿಯಲ್ಲ.

2) ಸ್ವಲ್ಪ ಸಮಯದ ನಂತರ ನವಲಗುಂದ ಕಡೆಗೆ ಹೋಗಲು ಬಸ್ಸನ್ನು ಏಕಾಏಕಿ ಹಿಂದೆ ನೋಡದೆ ನಿಷ್ಕಾಲಜಿತನದಿಂದ ಹಿಂದಕ್ಕೆ ತೆಗೆದುಕೊಂಡು ಬಸ್ಸಿನ ಹಿಂದೆ ಅಕ್ಕಿ ಕಾಳುಗಳನ್ನು ಹಾರಿಸುತ್ತಿದ್ದ ಶಾಂತವ್ವ ಸುರೇಶ ಬನ್ನಿಗೋಳ ಇವರಿಗೆ ಗುದ್ದಿ, ಬಲಗಾಲಿನ ಮೇಲೆ ಬಸ್ಸಿನ ಹಿಂದಿನ ಚಕ್ರವನ್ನು ಹಾಯಿಸಿ ಬಾರಿ ಪ್ರಮಾಣದ ಗಾಯವನ್ನು ಮಾಡಿರುತ್ತಾರೆ ಅಂದರೆ ಸರಿಯಲ್ಲ. ಗಾಯಾಳುವನ್ನು ನಾವು ಅಣ್ಣಿಗೇರಿ ಆಸ್ಪತ್ರೆಗೆ ಸೇರಿಸಿ ಹೆಚ್ಚಿನ ಚಿಕಿತ್ಸೆಗೆ ಹುಬ್ಬಳ್ಳಿಗೆ ಕರೆದುಕೊಂಡು ಹೋಗಿರುತ್ತಾರೆ ಅಂದರೆ ಸರಿಯಲ್ಲ. ಇದರ ಬಗ್ಗೆ ಚಾಸಾ-1 ರವರು ಪ್ರಥಮ ಮಾಹಿತಿಯನ್ನು ನೀಡಿರುತ್ತಾರೆ ಅಂದರೆ ಸರಿಯಲ್ಲ.

3) ನಾನು ಇದರ ಬಗ್ಗೆ ದಿನಾಂಕ 09-04-2019 ರಂದು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಅಂದರೆ ಸರಿಯಲ್ಲ. ಸದರಿ ಹೇಳಿಕೆ "ದಿನಾಂಕ 09-04-2019…….ರಿಂದ……ಮಾಡಿಸಿದ ಹೇಳಿಕೆ" ಭಾಗವನ್ನು ನಿ.ಪಿ.**8** ಎಂದು ಗುರುತಿಸಲಾಯಿತು.

4) ಅದೇ ರೀತಿ ದಿನಾಂಕ 10-04-2019 ರಂದು ಪೊಲೀಸರ ಮುಂದೆ ನಾನು ಠಾಣೆಗೆ ಬಂದಾಗ ಈ ಮೇಲೆ ಹೇಳಿದ ಆರೋಪಿತನು ತನ್ನ ಬಸ್ಸನ್ನು ಶಾಂತವ್ವ ಸುರೇಶ ಬನ್ನಿಗೋಳ ಇವರ ಮೇಲೆ ಹಾಯಿಸಿ ಸದರಿಯವರು ಚಿಕಿತ್ಸೆ ಫಲಕಾರಿಯಾಗದೇ ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಯಲ್ಲಿ ಮರಣ ಹೊಂದಿರುತ್ತಾರೆ ಎಂಬ ವಿಷಯವನ್ನು ತಿಳಿದು ನಾನು ಠಾಣೆಯಲ್ಲಿ ಮರುಹೇಳಿಕೆ ನೀಡಿರುತ್ತೇನೆ ಅಂದರೆ ಸರಿಯಲ್ಲ. ಸದರಿ ಮರುಹೇಳಿಕೆಯ ಭಾಗವನ್ನು "ಇವಳು ಹುಬ್ಬಳ್ಳಿ ….. ರಿಂದ …….ಪುನರ ಹೇಳಿಕೆ" ಭಾಗವನ್ನು ನಿ.ಪಿ.**9** ಎಂದು ಗುರುತಿಸಲಾಯಿತು.

5) ಸದರಿ ಘಟನೆಯ ಬಗ್ಗೆ ನಾನು ಪ್ರತ್ಯಕ್ಷ ಸಾಕ್ಷಿದಾರನು ಇದ್ದು, ಆರೋಪಿತನು ತನ್ನ ಬಸ್ಸನ್ನು ನಿಷ್ಕಾಲಜಿತನದಿಂದ ಹಿಂದೆ ನೋಡದೆ ಏಕಾಏಕಿ ಹಿಂದೆ ತೆಗೆದುಕೊಂಡ ಕಾರಣ, ಶಾಂತವ್ವ ಸುರೇಶ ಬನ್ನಿಗೋಳ ಇವರು ಬಾರಿ ಪ್ರಮಾಣದ ಗಾಯವಾಗಿದ್ದರಿಂದ, ಚಿಕಿತ್ಸೆ ಫಲಕಾರಿಯಾಗದೇ ಸದರಿಯವರು ಮೃತ ಪಟ್ಟ ಬಗ್ಗೆ ಮಾಹಿತಿ ಇದ್ದರು ಸಹ, ಇಲ್ಲವೆಂದು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

*ಪಾಟೀಸವಾಲು ಆರೋಪಿ ಪರ ಶ್ರೀ ಎಸ್ ಎಸ್ ಎ ವಕೀಲರಿಂದ ಃ-*

ಪಾಟೀಸವಾಲು ಇಲ್ಲಾ ಎಂದು ನಿವೇದಿಸಿಕೊಂಡ ಕಾರಣ ಪಾಟೀಸವಾಲು ಇಲ್ಲಾ ಎಂದು ಪರಿಗಣಿಸಲಾಯಿತು.

ಮರು ವಿಚಾರಣೆ ಃ ಇಲ್ಲಾ.

**(ತೆರೆದ ನ್ಯಾಯಾಲಯದಲ್ಲ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)
**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**
**ನವಲಗುಂದ.**